# ಅಧ್ಯಾಯ - 9

# ದೇವರನ್ನು ಕುರಿತು ಆತನನ್ನು ಎದುರು ನೋಡುವುದು

## ಶೋಧನೆ ಮತ್ತು ಅದನ್ನು ಹೇಗೆ ಎದುರಿಸಬೇಕು ?

ನಾವು ಅನೇಕ ವಿಧವಾದ ಕಷ್ಟಗಳನಡುವೆ ಈ ಲೋಕದಲ್ಲಿ ಜೀವಿಸಬೇಕೆಂದು ದೇವರಿಂದ ಆರಿಸಲ್ಪಟ್ಟುದ್ದೇವೆ. ದೇವರ ವಾಕ್ಯವು ಹೇಳುವುದೇನೆಂದರೆ, ನಮ್ಮ ಹಳೇಯ ಪಾಪದ ಸಹವಾಸದಿಂದಲೇ ನಾವು ದೇವರಿಗೆ ದೂರವಾಗಿ ಜೀವಿಸಿದೆವು. ಆದರೆ ಯೇಸುಕ್ರಿಸ್ತನನ್ನು ನಂಬುವುದರ ಮೂಲಕ ಹೊಸದಾಗಿ ಹುಟ್ಟಿ ದೇವರ ಮಕ್ಕಳಾಗಿ ನಾವು ಜೀವಿಸುವಂತೆ ದೇವರು ನಮ್ಮ ಮೇಲೆ ಪವಿತ್ರಾತ್ಮನ ಮುದ್ರೆಯನ್ನು ಹಾಕಿದ್ದಾನೆ. ಆದುದರಿಂದ ಇನ್ನು ಮುಂದೆ ನಾವು ಪಾಪವನ್ನು ಮಾಡದೇ, ಹಳೆಯ ಸ್ವಭಾವನ್ನು ಧರಿಸದೇ, ದೇವರ ವಾಕ್ಯವನ್ನು ವ್ಯತ್ಯಾಸಮಾಡದೇ ದೇವರಲ್ಲಿ ಶಾಂತಿಯಿಂದ ಜೀವಿಸಬೇಕು. ಈಗ ನಾವು ಪಾಪವನ್ನು ಮಾಡುವ ಅವಶ್ಯಕತೆ ಇಲ್ಲ. ಯಾಕೆಂದರೆ ಯೇಸುಕ್ರಿಸ್ತನು ಪಾಪದ ಮೇಲೆ ತಾನು ಕಲ್ವರಿಯ ಶಿಲುಬೆಯಲ್ಲಿ ಸುರಿಸಿದ ಶುದ್ಧವಾದ ರಕ್ತದ ಮೂಲಕ ಶೊದನೆಗಳನ್ನು ಜಯಿಸಲು ಶಕ್ತಿಯನ್ನು ಕೊಟ್ಟಿದ್ದಾನೆ.

> ''ಮನುಷ್ಯರು ಸಹಿಸಬಹುದಾದ ಶೋಧನೆಯೇ ಹೊರತು ಬೇರೆ ಯಾವುದೂ ನಿಮಗೆ ಸಂಭವಿಸಲಿಲ್ಲ. ದೇವರು ನಂಬಿಗಸ್ತನು ನಿಮ್ಮ ಶಕ್ತಿಯನ್ನು ಮೀರುವ ಶೋಧನೆಯನ್ನು ನಿಮಗೆ ಬರಗೊರೆಸಸಿದೆ ನೀವು ಅದನ್ನು ಸಹಿಸುವುದಕ್ಕೆ ಶಕ್ತರಾಗುವಂತೆ ಶೋಧನೆಯಾಗುತ್ತಲೇ ತಪ್ಪಿಸಿಕೊಳುವ ಮಾರ್ಗವನ್ನು ಸಿದ್ದಮಾಡುವನು''.
>
> ೧ ಕೊರಿಂಥ ೧೦:೧೩.

ನಾವು ಪಾಪದ ಮೂಲಕ ಶೋದನೆಗಳನ್ನು ಹೊಂದಬಾರದು. ಆದರೆ ನಾವು ನೀತಿವಂತರಾಗಿ ಜೀವಿಸುತ್ತಾ ಯೇಸು ಕ್ರಿಸ್ತನಿಗಾಗಿ ಶೋಧನೆ ಎದುರಿಸಿದರೆ

ದೇವರು ನಮ್ಮನು ಬಲಪಡಿಸಿ ಶೋಧನೆಗಳನ್ನು ಜಯಿಸಲು ತನ್ನ ಪವಿತ್ರಾತ್ಮನ ಮೂಲಕ ಸಹಾಯಮಾಡುತ್ತಾನೆ.

## ಪಾಪವನ್ನು ಮಾಡಿದರೆ ಬರುವ ಪ್ರತಿಫಲವೇನು?

ಯೇಸುಕ್ರಿಸ್ತನು ಈ ಲೋಕದಲ್ಲಿ ಜೀವಿಸದಾಗ ನಮ್ಮಂತೆಯೇ ಕೋಧಿಸಲ್ಪಟ್ಟನು. ಆದರೆ ಆತನು ಪಾಪ ಮಾತ್ರ ಮಾಡಲಿಲ್ಲ (ಮತ್ತಾಯ ೪ : ೧-೧೧) ಶೋದನೆಯಲ್ಲಿ ಸೋಲುವುದೇ ಪಾಪವಾಗಿದೆ. ಹೀಗೆ ಪಾಪದಲ್ಲಿ ಬಿದ್ದವರಿಗೆ ಯೇಸುಕ್ರಿಸ್ತನಲ್ಲಿ ಆತನ ಅಮೂಲ್ಯವಾದ ರಕ್ತದ ಮೂಲಕ ಪಾಪ ಕ್ಷಮಾಪಣೆ ಇದೆ. ಆದರೆ ನೀನು ಯಥಾರ್ಥವಾಗಿ ದೇವರ ಸನ್ನಿಧಿಯಲ್ಲಿ ನಿನ್ನ ಪಾಪವನ್ನು ಒಪ್ಪಿಕೊಂಡು ದೇವರ ಸನ್ನಿದಿಯಲ್ಲಿ ವಿದೇಯನಾಗಿ ನಡೆದರೇ ಯೇಸುಕ್ರಿಸ್ತನು ನಿನ್ನನ್ನು ನಿಜವಾಗಿ ಕ್ಷಮಿಸುವನು. ಮತ್ತು ನಿನ್ನ ಹಳೆಯಸ್ಥಿತಿಯನ್ನು ಮರೆತುಹೋಗುವನು.

ನಿಜವಾಗಿ ನಿನ್ನ ಪಾಪಕ್ಕಾಗಿಯೇ ಯೇಸುಕ್ರಿಸ್ತನು ಶಿಲುಬೆಯಲ್ಲಿ ಮರಣವನ್ನು ಹೊಂದಿ ರಕ್ತವನ್ನು ಸುರಿಸಿದನು. ನೀನು ಹೀಗೆ ನಂಬಿದಾಗಲೇ ನಿನಗೆ ರಕ್ಷಣೆಯಾಗುವುದು. ''ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ, ಆತನು (ಯೇಸು) ನಂಬಿಗಸ್ತನೂ ನೀತಿನಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದಿ ಮಾಡುವನು. ಮತ್ತು ಯೇಸುಕ್ರಿಸ್ತನ ರಕ್ತವು ಸಕಲ ಪಾಪವನ್ನು ನಿವಾರಣೆಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ. (೧ ಯೋಹಾನ ೧ : ೯, ೭)

## ಯೇಸು ನಮಗೆ ಸಹಾಯ ಮಾಡುತ್ತಾನೆ.

ಯೇಸುಕ್ರಿಸ್ತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು (ಎಫೆಸ ೧ : ೭)

ಆದುದರಿಂದ ಕ್ರಿಸ್ತ ಯೇಸು ವಿನಲ್ಲಿರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ. (ರೊಮಾ ೮ : ೧)

ಯಾಕೆಂದರೆ, ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲಿ. ಆತನು ಸರ್ವ ವಿಷಯಗಳಲ್ಲಿ ನಮ್ಮಹಾಗೆ ಶೋಧನೆಗೆ ಗುರಿಯಾದನು? ಪಾಪ ಮಾತ್ರಮಾಡಲಿಲ್ಲ.

ಯೇಸುಕ್ರಿಸ್ತನು ಶೋದನೆಗೆ ಬಳಗಾಗಿ ಪಾಪಮಾಡುವಂತೆ ಸೈತಾನನು ಪ್ರಯತ್ನಿಸಿದರೂ. ಯೇಸುಕ್ರಿಸ್ತನು ಪಾಪ ಮಾಡಲಿಲ್ಲ. ಆತನು ಪರಿಶುದ್ಧನೇ ಆಗಿದ್ದಾನೆ.

ನೀನು ಏನನ್ನು ಬಿತ್ತುತ್ತೀಯೋ ಅದನ್ನೇ ಕೊಯ್ಯುವಿ ದೇವರ ರಾಜ್ಯವು ಹೊಲದಲ್ಲಿ ಒಬ್ಬನು ವ್ಯವಸಾಯ ಮಾಡುವ ರೀತಿಯನ್ನು ಹೋಲಿಸಲ್ಪಟ್ಟಿದೆ. ( ಲೋಕ ೬ : ೩ ೩೮) ನೀನು ದೇವರಿಗೆ ವಿರೋಧವಾಗಿ ಜೀವಿಸಿದರೆ ಪಾಪ, ಅಸೂಯೆ, ದುಖಃ, ಕಷ್ಟ, ರೋಗಗಳೆಂಬ ಫಲವನ್ನೇ ಕೊಯ್ಯುತ್ತೀಯೆ. ದೇವರಿಗೆ ಇಷ್ಟನಾಗಿ ನೀನು ಈ ಲೋಕದಲ್ಲಿ ಜೀವಿಸಿದರೆ, ಈ ಲೋಕದಲ್ಲಿ ನೀನು ಶಾಂತಿ, ಸಮಾಧಾನ, ಆತ್ಮದ ಫಲ, ಶಕ್ತಿ ಎಂಬ ಫಲವನ್ನು ಕೊಯ್ಯುವಿ. (೧ ಕೊರಿಂಥ ३ : ೧೧-೧೫)

## ಸೈತಾನನು ಯಾರು ?

ದೇವರು ತನ್ನ ರಾಜ್ಯದಲ್ಲಿ ತನ್ನ ಸಿಂಹಾಸನವನ್ನೇ ಕೋರಿ ಮನಸ್ಸಿನಲ್ಲಿ ಪಾಪಮಾಡಿ ದೇವರಿಂದ ಈ ಲೋಕಕ್ಕೆ ತಳ್ಳಲ್ಪಟ್ಟವನೇ ಸೈತಾನನು. ಆತನು ದೇವರ ವಿರೋಧಿ. ಆತನಲ್ಲಿ ಕಕ್ತಲೆ ಇದೆ. ಯೇಸುವಿನ ಭಕ್ತರಿಗೆ ಆತನು ಶತ್ರುವೇ ಆಗಿದ್ದಾನೆ.

ಸ್ವಸ್ಥಚಿತ್ತರಾಗಿರಿ, ಎಚ್ಚರವಾಗಿರಿ ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ. ನೀವು ನಂಬಿಕೆಯಲ್ಲಿ ದೃಢವಾಗಿದ್ದು ಅವನನ್ನು ಎದುರಿಸಿರಿ (೧ ಪೇತನು ೫ : ೮, ೯) ನಮ್ಮ ಜೀವನದಲ್ಲಿ ಸೈತಾನನಿಗೆ ಬಳಪಟ್ಟರೆ ನಮಗೆ ನರಕವೇ ಗತಿ. ಸೈತಾನನನ್ನು ತುಳಿದು ಜಯಿಸಿದ ಯೇಸು ಕ್ರಿಸ್ತನೇ ನಮ್ಮ ನಾಯಕನೂ, ರಕ್ಷಕನೂ, ದೇವರೂ ಆಗಿದ್ದಾನೆ.

> ''ಹೀಗಿರಲಾಗಿ ದೇವರಿಗೆ ಬಳಗಾಗಿರಿ, ಸೈತಾನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿ ಹೋಗುವನು (ಯಾಕೋಬು ೪:೯)

> ''ಪಾಪಮಾಡುವವನು ಸೈತಾನನಿಂದ ಹುಟ್ಟಿದವನಾಗಿದ್ದಾನೆ, ಆದಿಯಿಂದಲೂ ಸೈತಾನನು ಪಾಪಮಾಡುವವನಾಗಿದ್ದಾನಲ್ಲ. ಸೈತಾನನ ಕೆಲಸಗಳನ್ನು ಲಯಮಾಡುವುದಕ್ಕೋಸ್ಕರವೇ ಯೇಸುಕ್ರಿಸ್ತನು ಪ್ರತ್ಯಕ್ಷನಾದನು'' (೧ ಯೋಹಾನ ೩ : ೮)

> ''ಯೇಸುಕ್ರಿಸ್ತನು ದೊರೆತನಗಳನ್ನು ಅಧಿಕಾರಗಳನ್ನು ನಿರಾಯುಧರನ್ನಾಗಿ ಮಾಡಿ ಜಯೋತ್ಸವ ಮಾಡುತ್ತಾನೋ ಎಂಬಂತೆ ಶಿಲುಬೆಯ ಮೇಲೆ ಅವುಗಳನ್ನು ಜಯಿಸಲ್ಪಟ್ಟವುಗಳಾಗಿ ಮೆರೆಸುತ್ತಾ ತೋರಿಸಿದನು'' (ಕೊಲಸ್ಸೆ ೨ : ೧೫)

ಆದುದರಿಂದ ಸೈತಾನನ ಯಾವುದೇ ರೀತಿಯ ಶೋಧನೆಗಳಿಗೆ ಬಳಗಾಗದೇ ಆತನ ತಂತ್ರಗಳನ್ನು ಎದುರಿಸಿ ಯೇಸುಕ್ರಿಸ್ತನು ಶಿಲುಬೆ ಮರಣದ ಮೂಲಕ ಜಯಿಸಿದ ಹಾಗೆ ನಾವು ಕೂಡ ಅದಿಕಾರವನ್ನು ಹೊಂದಿದವರಾಗಿದ್ದೇವೆ. ಹೀಗೆ ನೀನು ನಿನ್ನ ಶುದ್ಧಹೃದಯದಿಂದ ನಿನ್ನ ವಿರೋಧಿಯನ್ನು ಯೇಸು ರಕ್ತದ ಮೂಲಕ ಜಯಿಸಿದಾಗ ಅವನು ಓಡಿ ಹೋಗುವನು.

ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವ ರಾಗುವಂತೆ ದೇವರು ಆದುಕೊಂಡ ರಾಜ ವಂಶಸ್ಥರಾದ ಯಾಜಕರೂ, ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ. (೧ ಪೇತ್ರ ೨ : ೯)

## ಪ್ರಶ್ನೆಗಳು ಮತ್ತು ವಿಷಯಗಲು :

೧. ದೇವರು ನಮ್ಮನ್ನು ಹೇಗೆ ಶೋಧಿಸುವನು ? (ಯಾಕೋಬ ೧ : ೧೩-೧೫)

೨. ಯೇಸುಕ್ರಿಸ್ತನ ಮಾತಿನಲ್ಲಿ ವಿರೋದಿ ಈಗ ಎಲ್ಲಿದ್ದಾನೆ ? (ಎಫೆಸಿ ೧ : ೧೯-೨೩)

೩. ನಿನ್ನನು ಬಲಗೊಳಿಸಿಕೊಳ್ಳಲು ಈ ವಾಕ್ಯಗಳನ್ನು ಓದು. (ಫಿಲಿಪ್ಪಿ ೪ : ೧೩) ಯಾಕೋಬ ೧ : -೪ (ಯೋಹಾನ ೪ : ೪)

## ಪ್ರಾರ್ಥನೆ :

ಒಳ್ಳೆಯ ಕುರುಬನಾದ ಯೇಸುವೇ ನನ್ನನ್ನು ಕ್ಷಮಿಸಿದಕ್ಕಾಗಿ ಸ್ತೋತ್ರ. ಹೀಗೆ ನಿನ್ನಲ್ಲಿ ಶೋಧನೆಗಳನ್ನು ಜಯಿಸಲು ನನಗೆ ಸಹಾಯ ಮಾಡುತ್ತೀಯೆಂದು ನಂಬಿ ಯೇಸುವಿನ ನಾಮದಲ್ಲಿ ಪ್ರಾರ್ಥಿಸಿ ಸ್ತುತಿಸುತ್ತೇನೆ. ಆಮೆನ್.